STARRED QUESTIONS

(to which Oral Answers were given)

Majalthota Pavoor Road in S.K. District

1 SRI U. T. FAREED (Ullal).—Will the Minister for Public Works be pleased to state:—

(*a*) whether it is a fact that there are many representations from Public as well as from the concerned M.L.A.'s for taking up the Majalthota Pavoor road in S.K. District;

(*b*) whether it is a fact that this road which has been included continuously for the past 3 years in the budget estimates has not been taken up so far?

(*c*) if so, the reason for not taking up?

SRI S. BANGARAPPA (Minister for Public Works).—

(*a*) No. but there are representations to take up the construction of bridge at Majalthota in Ambalmogam village on Parmannur-Pavoor road which is taken over to Public Works Department in December 1970 for improvement and maintenance.

(*b*) No. The bridge work at Majalthota included in the budget during 1975-76, 1976-77 and 1977-78 has not been taken up due to meagre budget provision.

(*c*) Does not arise.

ಶ್ರೀ ಯು. ಟಿ. ಫರೀದ್.—ಈ ಹೊಸ ರಸ್ತೆಯ ಅಂದಾಜಂ ಎಷ್ಟು ಎಂಬುದನ್ನು ಹೇಳುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ಪಟ್ಟಿಯನ್ನು ನಮಗೆ ಮೊದಲೇ ಕಳುಹಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ವಿಧಾನಪರಿಷತ್ತಿನ ಸದಸ್ಯರಿಗೆ ಕಾರ್ಯಕ್ರಮದ ಪಟ್ಟಿಯ ಜೊತೆಯಲ್ಲಿ ಪ್ರಶ್ನೋತ್ತರ ಪಟ್ಟಿಯನ್ನು ಮೊದಲೇ ಕಳುಹಿಸಿ ಕೊಡುವಂತೆ ನಮಗೂ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅದನ್ನು ಪರಿಶೀಲನೆ ಮಾಡೋಣ.

†ಶ್ರೀ ಎಸ್ ಬಂಗಾರಪ್ಪ.—ಉತ್ತರದಲ್ಲಿ ಹೇಳಿರುವಂತೆ ಈ ರಸ್ತೆಯನ್ನು ಬಜೆಟಿನಲ್ಲಿ ಸೇರಿಸಿಲ್ಲ. ನಾವು ಬಜೆಟಿನಲ್ಲಿ ಸೇರಿಸಬೇಕೆಂದಿರುವುದು ಸೇತುವೆಯ ಬಗ್ಗೆ ಮಾತ್ರ. ನಾವು ಪ್ರಶ್ನೆ ಕೇಳುವಾಗ ಈ ಸೇತುವೆಯ ಬಗ್ಗೆ ಮಾತ್ರ ಕೇಳಬೇಕಾಗಿತ್ತು. ಏಕೆಂದರೆ ರಸ್ತೆ ಕೆಲಸ ಇದರಲ್ಲಿ ಸೇರಿಲ್ಲ.

ಶ್ರೀ ಯು. ಟಿ. ಫರೀದ್.—ಉತ್ತರದಲ್ಲಿ ೧೯೭೦ನೇ ಇಸವಿಯಲ್ಲಿ ಈ ರಸ್ತೆಯನ್ನು ಇಂಪ್ರೂವ್ ಮೆಂಟ್ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಅಲ್ಲಿ ರಸ್ತೆ ಇಲ್ಲದೇ ಹೋದರೆ ಯಾವುದನ್ನು ಇಂಪ್ರೂವ್‌ಮೆಂಟ್‌ಗೆ ತೆಗೆದುಕೊಳ್ಳುತ್ತೀರಿ? ಈ ಪಾವೂರ್ ರಸ್ತೆಗೆ ಅಂದಾಜು ಮಾಡಿ ೧೯೭೫-೭೬, ೧೯೭೬-೭೭ ಮತ್ತು ೧೯೭೭-೭೮ರಲ್ಲಿ ಎಷ್ಟು ಹಣಕಾಸನ್ನು ಕೇಳಿದ್ದೀರಿ, ಎಷ್ಟು ಸಿಕ್ಕದೇ ಹೋದ ಕಾರಣ ಅದು ಬಿದ್ದುಹೋಗಿದೆಯೇ?

ಶ್ರೀ ಎಸ್. ಬಂಗಾರಪ್ಪ.—ಆ ವರದಿ ನನ್ನ ಹತ್ತಿರ ಇಲ್ಲ. ಬಜೆಟ್‌ಗೆ ಸೇರಿರತಕ್ಕಂಥಾದ್ದು ಎಂದರೆ, ಅಲ್ಲಿ ಆಗತಕ್ಕ ಸೇತುವೆ ಮಾತ್ರ. ೧೯೭೦ನೇ ಇಸವಿಯಲ್ಲಿ ಆ ರಸ್ತೆಯನ್ನು ಪಿ.ಡಬ್ಲ್ಯೂ.ಡಿ. ನವರು ತೆಗೆದುಕೊಂಡಿದ್ದರು. ಅದಕ್ಕೆ ಅಂದಾಜು ಎಷ್ಟು ಎನ್ನುವ ಪ್ರಶ್ನೆ ಬಜೆಟ್ಟಿಗೆ ಬರುವುದಿಲ್ಲ. ಉತ್ತರದಲ್ಲಿ ಹೇಳಿರುವುದು ಸೇತುವೆಗೆ ಮಾತ್ರ.

ಶ್ರೀ ಯು. ಟಿ. ಫರೀದ್.—ಇಂಪ್ರೂವ್‌ಮೆಂಟ್‌ಗೆ ತೆಗೆದುಕೊಳ್ಳಬೇಕಾದರೆ ರಸ್ತೆ ಇರಬೇಕಲ್ಲ; ಅಲ್ಲಿ ರಸ್ತೆ ಆಗಿಲ್ಲ. ೧೯೭೦ನೇ ಇಸವಿಯಲ್ಲಿ ರಸ್ತೆಯನ್ನು ಹೇಗೆ ಅಭಿವೃದ್ಧಿಗೆ ತೆಗೆದುಕೊಂಡರು?

ಶ್ರೀ ಎಸ್. ಬಂಗಾರಪ್ಪ. ಉತ್ತರದಲ್ಲಿ ಸೇತುವೆಗೆ ಸಂಬಂಧಪಟ್ಟ ವಿಷಯವನ್ನು ಮಾತ್ರ ಹೇಳಿರತಕ್ಕಂಥಾದ್ದು.

ಶ್ರೀ ಬಿ. ವಿ. ಕಕ್ಕಿಲಾಯ.—ಲೋಕೋಪಯೋಗಿ ಇಲಾಖೆಯವರು ಈ ರಸ್ತೆಯನ್ನು ಮೇಂಟೆನೆನ್ಸ್‌ಗೆ ತೆಗೆದುಕೊಂಡರು ಎಂದು ಹೇಳಲಾಗಿದೆ. ಈ ಮೂರು ವರ್ಷಗಳಲ್ಲಿ ಆ ರಸ್ತೆಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ; ಅಲ್ಲಿ ರಸ್ತೆ ಏನಾದರೂ ಇದೆಯೇ, ಇದ್ದರೆ ಏನಾದರೂ ಇಂಪ್ರೂವ್ ಮೆಂಟ್ ಮಾಡಿದ್ದೀರಾ?

ಶ್ರೀ ಎಸ್. ಬಂಗಾರಪ್ಪ.—ಈ ರಸ್ತೆಗಳನ್ನು ತೆಗೆದುಕೊಂಡ ಮೇಲೆ ಪ್ರತಿ ವರ್ಷ ನಾರ್ಮಲ್ ಕೋರ್ಸ್‌ನಲ್ಲಿ ಎಷ್ಟು ಮೇಂಟೆನ್ ಮಾಡಬೇಕೋ ಅಷ್ಟನ್ನು ಮಾತ್ರ ಮಾಡುತ್ತಿದ್ದೇವೆ. ಇದೇ ರೀತಿ ಇನ್ನೂ ಅನೇಕ ರೋಡುಗಳಿವೆ. ಫಂಡ್ಸ್ ಇನ್ನೂ ಜಾಸ್ತಿ ಬೇಕಾಗುತ್ತದೆ ಪಣ ಒದಗಿದ ಕೂಡಲೆ ಈ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ಸರ್ಕಾರದ ಗಮನದಲ್ಲಿದೆ. ಈ ರಸ್ತೆ ಅತಿ ಮುಖ್ಯ ವಾದದು. ಆದಷ್ಟು ಜಾಗ್ರತೆ ಈ ರಸ್ತೆಯ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಯು. ಟಿ. ಫರೀದ್. ದಕ್ಷಿಣ ಕನ್ನಡ ಜಿಲ್ಲೆಯ ಮಜಲಿತೋಟ ಪುಪೂರ್ ರಸ್ತೆಯನ್ನು ಕೈಗೊಳ್ಳುವ ಬಗ್ಗೆ ಸಂಬಂಧಪಟ್ಟ ವಿಧಾನ ಸಭಾ ಸದಸ್ಯರಿಂದ ಹಾಗೂ ಸಾರ್ವಜನಿಕರಿಂದ ಅನೇಕ ಮನವಿಗಳು ಬಂದಿರುವುದು ನಿಜವೇ ಎಂದು ಕೇಳಿದ್ದಕ್ಕೆ ಉತ್ತರದಲ್ಲಿ ಬಂದಿಲ್ಲ ಎಂದು ಕೊಟ್ಟಿದ್ದೀರಿ. ಬಹುಶಃ ಕಳೆದ ವರ್ಷ ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿದ್ದಾಗ ೨೦ ಪಾಯಿಂಟ್ ಕಾರ್ಯಕ್ರಮದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದಾರೆ ಸಂಬಂಧಪಟ್ಟಗ್ರಾಮದವರು ಬಂದು ಪಂಚಾಯಿತಿ ಛೇರ್ಮನ್ ಮುಖಾಂತರ ಮನವಿಯನ್ನು ಕೊಟ್ಟಿದ್ದಾಗ ಮತ್ತು ಅದಕ್ಕೆ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ ಅದು ತಪ್ಪಾಗಿ ಏನಾದರೂ ಗೊತ್ತಿದೆಯೇ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರಿಗೆ ಕೊಟ್ಟಿರತಕ್ಕ ಅರ್ಜಿ ಮತ್ತು ಅದಕ್ಕೆ ಕೊಟ್ಟಿರತಕ್ಕ ಉತ್ತರದ ಬಗ್ಗೆ ವರದಿ ನನ್ನ ಹತ್ತಿರವಿಲ್ಲ. ಒಂದು ವೇಳೆ ಅರ್ಜಿ ಕೊಟ್ಟಿದ್ದರೆ, ಅದನ್ನು ತರಿಸಿಕೊಂಡು ಮಾನ್ಯ ಮಂತ್ರಿಗಳು ಯಾವ ರೀತಿ ಉತ್ತರವನ್ನು ಕೊಟ್ಟಿದ್ದಾರೋ ಅದನ್ನು ನೋಡಿ, ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಯು. ಟಿ. ಫರೀದ್.—ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದು ಕೊಳ್ಳಲಿಲ್ಲ. ಅಲ್ಲಿ ರಸ್ತೆಯೂ ಇಲ್ಲ, ಹೊಸ ರಸ್ತೆಯಾಗಬೇಕು. ಇದನ್ನು ವಿಚಾರಿಸುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಹೊಸ ರಸ್ತೆಯಾಗಬೇಕು ಎಂದು ಹೇಳುತ್ತಿದ್ದೀರಿ. ಇದರ ಬಗ್ಗೆ ಶೀಘ್ರವಾಗಿ ವರದಿಯನ್ನು ತರಿಸಿಕೊಂಡು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇನೆ,

ಶ್ರೀ ಯು. ಟಿ. ಫರೀದ್.—ಈ ವರ್ಷ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಹಣಕಾಸಿನ ಶಕ್ತಿಯ ಮೇಲೆ ನಾವು ಕೆಲಸಗಳನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಇದು ಸೇತುವೆಗೆ ಸಂಬಂಧಪಟ್ಟ ಪ್ರಶ್ನೆ ಇದೆ. ಅದಕ್ಕೆ ಅನೇಕ ಮನವಿಗಳು ಬಂದಿವೆ. ಸೇತುವೆಯ ಕೆಲಸವನ್ನು ನಾವು ಮುಂದಿನ ವರ್ಷ ತೆಗೆದುಕೊಳ್ಳುತ್ತೇವೆ. ರಸ್ತೆಯ ಕೆಲಸವನ್ನೂ ಜೊತೆಗೆ ತೆಗೆದುಕೊಳ್ಳುತ್ತೇವೆ.